## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿತ್ತೀಯ ಕಾರ್ಯನೀತಿ ಸಂಸ್ಥೆಯ ಬೋಧಕರ ಹುದ್ದೆಗಳ ನೇಮಕಾತಿಗಳಿಗೆ ರಚಿಸಲಾದ Search-and-Selection Committeeಯನ್ನು ವಿಸರ್ಜಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಆಇ 16 ಸಾವಿಯೋ 2011, ದಿನಾಂಕ:17.05.2011.
2. ನಿರ್ದೇಶಕರು ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ವಿಕಾಸಂ/ಸಿ/16/2015-16/1161, ದಿನಾಂಕ:03.02.2016.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ:17.05.2011ರ ಸರ್ಕಾರಿ ಆದೇಶದಲ್ಲಿ ಬೆಂಗಳೂರಿನ ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಮಂಜೂರಾಗಿರುವ ಬೋಧಕರ ಹಾಗೂ ಅಧಿಕಾರಿಗಳ ಹುದ್ದೆ ಭರ್ತಿ ಮಾಡಲು ಮಾರ್ಗದರ್ಶಿ ಸೂತ್ರಗಳನ್ನು ನೀಡುವುದರೊಂದಿಗೆ ನಾಲ್ವರು ಅಧಿಕಾರಿಗಳನ್ನೊಳಗೊಂಡ Search and Selection Committeeಯನ್ನು ರಚಿಸಲಾಗಿತ್ತು.

ನಿರ್ದೇಶಕರು ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು, ಅವರು ಮೇಲೆ (2)ರಲ್ಲಿ ಓದಲಾದ ದಿನಾಂಕ:03.02.2016ರ ಪತ್ರದಲ್ಲಿ ಯಾವುದೇ ಬೋಧಕರನ್ನು, ಅಧಿಕಾರಿಗಳನ್ನು ಸಂದರ್ಶನ ನಡೆಸಿ ನೇಮಕ ಮಾಡಿಕೊಳ್ಳಲು Search and Selection Committee ಸಭೆ ಕರೆಯಬೇಕಿದ್ದು, ಎಲ್ಲಾ ಸದಸ್ಯರ ದಿನಾಂಕ ಹೊಂದಿಸಿ ಸಭೆಯ ದಿನಾಂಕ ನಿಗದಿಪಡಿಸುವುದು ಸದಸ್ಯರ ಬಿಡುವಿಲ್ಲದ ಕಾರ್ಯಕ್ರಮಗಳಿಂದಾಗಿ ಕಷ್ಟಸಾಧ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಪ್ರಸ್ತುತ ಅಧಿಕಾರಿ ಹಾಗೂ ಬೋಧಕರನ್ನು Search and Selection Committee ಮೂಲಕ ಸಂದರ್ಶನ ನಡೆಸಿ ಆಯ್ಕೆಯಾದ ಅಧಿಕಾರಿಗಳ ಮಾತೃ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆದು ಪ್ರತಿನಿಯೋಜನೆಯ ಮೂಲಕ ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ.

ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ಮುಕ್ತ ಮಾರುಕಟ್ಟೆಯಿಂದ ಬೋಧಕರಾಗಿ ಬರಲು ಇಚ್ಛಿಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿದಾಗ ಸರಿಯಾದ ಸಮಯಕ್ಕೆ ಸಭೆ ಕರೆಯಲಾಗದೇ ನುರಿತ ಅರ್ಹ ಬೋಧಕರನ್ನು ನೇಮಕ ಮಾಡಿಕೊಳ್ಳಲು ತೊಡಕಾಗುವುದರಿಂದ, ಸದರಿ Search and Selection Committeeಯನ್ನು ವಿಸರ್ಜಿಸುವುದರೊಡನೆ ಆಯ್ಕೆ ಪ್ರಕ್ರಿಯೆಯ ಕಾರ್ಯವಿಧಾನವನ್ನು ಪರಿಷ್ಕರಿಸಿ ಬೋಧಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವ ಅಭ್ಯರ್ಥಿಗಳ ಅರ್ಜಿಗಳನ್ನು ನಿರ್ದೇಶಕರ ಹಂತದಲ್ಲಿ ಪರಿಶೀಲಿಸಿ ವಿತ್ತೀಯ ಕಾರ್ಯನೀತಿ ಸಂಸ್ಥೆಯ ಆಡಳಿತ ಪರಿಷತ್ತಿನ ಛೇರ್ಮನ್‌ರವರ ಅನುಮೋದನೆಯೊಡನೆ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿ ಮುಂಬರುವ ಆಡಳಿತ ಪರಿಷತ್ತಿನ ಸಭೆಯಲ್ಲಿ ಘಟನೋತ್ತರ ಅನುಮೋದನೆ ಪಡೆಯುವ ಕಾರ್ಯವಿಧಾನವನ್ನು ನಿಗದಿಪಡಿಸಲು ಕೋರಿದ್ದಾರೆ. ಅರ್ಹತೆ ಹಾಗೂ ಇನ್ನಿತರ ಮಾನದಂಡಗಳನ್ನು ಈಗಾಗಲೇ ದಿನಾಂಕ:17.05.2011ರಂದು ಹೊರಡಿಸಲಾದ ಸರ್ಕಾರಿ ಆದೇಶದಲ್ಲಿರುವಂತೆಯೇ ಮಾರ್ಗದರ್ಶಿ ಸೂತ್ರಗಳನ್ವಯ ಆಯ್ಕೆ ಪ್ರಕ್ರಿಯೆ ಕಾರ್ಯವಿಧಾನವನ್ನು ಸರಳೀಕರಿಸಿ, ಅಗತ್ಯಕ್ಕನುಗುಣವಾಗಿ ಬಹು ಆಯ್ಕೆಯೊಡನೆ (To have Flexi multiple choice) ಮುಂದುವರೆಸುವಂತೆ ಕೋರಿದ್ದಾರೆ. ಮೇಲಿನ ಅಂಶಗಳನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

### ಸರ್ಕಾರಿ ಆದೇಶ ಸಂಖ್ಯೆ : ಆಇ 9 ಸಾವಿಯೋ 2016, ಬೆಂಗಳೂರು, ದಿನಾಂಕ:14.06.2016

ಪ್ರಸ್ತಾವನೆಯಲ್ಲಿ ವಿವರಿಸಲಾದ ವಾಸ್ತಾಂಶಗಳ ಹಿನ್ನೆಲೆಯಲ್ಲಿ, ವಿತ್ತೀಯ ಕಾರ್ಯನೀತಿ ಸಂಸ್ಥೆಯಲ್ಲಿ ಬೋಧಕರು/ಅಧಿಕಾರಿಗಳ ಹುದ್ದೆಗಳನ್ನು ಆಯ್ಕೆ ಮಾಡಲು ದಿನಾಂಕ:17.05.2011ರ ಸರ್ಕಾರಿ ಆದೇಶದಲ್ಲಿ ರಚಿಸಲಾಗಿದ್ದ Search and Selection Committeeಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿಸರ್ಜಿಸುತ್ತದೆ.

...2

ಕ್ರಮಾಂಕ : 400
ದಿನಾಂಕ : 24/6/16
ಬೆಂಗಳೂರು-560 060

ಇದರ ಪರಿಣಾಮವಾಗಿ ಬೋಧಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವ ಅಭ್ಯರ್ಥಿಗಳ ಅರ್ಜಿಗಳನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯ ನಿರ್ದೇಶಕರ ಹಂತದಲ್ಲಿ ಪರಿಶೀಲಿಸಿ ಆಡಳಿತ ಪರಿಷತ್ತಿನ ಛೇರ್ಮನ್‌ರವರ ಅನುಮೋದನೆಗಾಗಿ ಸಲ್ಲಿಸುವ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ಈ ಮೂಲಕ ಆದೇಶಿಸುತ್ತದೆ.

ಆಯ್ಕೆ ವಿಧಾನವು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಂತೆ ಇರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಜಿ. ಶಶಿಧರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಹೊರ ವಲಯ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು-560 059 - ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ:**

1) ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ ವೃತ್ತ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿಗಳು, Economic Advisory Council to the Prime Minister, Government of India, E-Hall, Vigyan Bhavan, Maulana Azad Road, New Delhi-110 011,
7) ಡೈರೆಕ್ಟರ್ ಜನರಲ್, ಆಡಳಿತ ತರಬೇತಿ ಸಂಸ್ಥೆ, ಮೈಸೂರು,
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9) ಸರ್ಕಾರದ ಕಾರ್ಯದರ್ಶಿಗಳು (ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10) ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಗಾಂಧಿನಗರ, ಬೆಂಗಳೂರು.
11) ಆಯುಕ್ತರು, ಅಬಕಾರಿ ಇಲಾಖೆ, ಗಾಂಧಿನಗರ, ಬೆಂಗಳೂರು.
12) ಸರ್ಕಾರದ ಕಾರ್ಯದರ್ಶಿಗಳು, ಸಿಆಸು ಇಲಾಖೆ, ವಿಧಾನಸೌಧ, ಬೆಂಗಳೂರು.
13) ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು-ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-60,
14) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ), ವಿಧಾನಸೌಧ, ಬೆಂಗಳೂರು.
15) ನೋಂದಣಿ ಮತ್ತು ಮಹಾಪರಿವೀಕ್ಷಕರು, ಬೆಂಗಳೂರು.
16) ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
17) ನಿಯಂತ್ರಕರು, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಟಿ.ಟಿ.ಎಂ.ಸಿ. ಕಟ್ಟಡ, ಎ ಬ್ಲಾಕ್, 3ನೇ ಮಹಡಿ, ಬಿ.ಎಂ.ಟಿ.ಸಿ., ಶಾಂತಿನಗರ, ಬೆಂಗಳೂರು.
18) ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
19) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

***

**ANNEXURE TO GOVERNMENT ORDER**

**NO. FD 9 SaViYo 2016, DATED: 14.06.2016.**

a) The Director, Fiscal Policy Institute shall select the faculty from (i) amongst the candidates who have applied in response to an advertisement or (ii) those whose nominations have been invited for deputation from Central or State Governments or Public Sector Undertaking or Universities or (iii) those chosen by it, in exceptional cases.

b) To maintain balance between faculties from different sources, i.e., from the State, the Centre and the academic field, not more than one-third of the faculty positions shall be filled by officers of Government of Karnataka, one-third shall be filled by Group `A` officers of Government of India, any other State including officers of All India Services. The remaining one-third shall be filled up by candidates with experience of working in reputed and recognized training or academic institutes supported by Government of India or State Government or Public Sector Undertakings or on contract basis.

c) All faculty shall have minimum post-graduate degree qualification, preferably with M.Phil, P.G. Diploma, Ph.D. or Post-Doctoral qualifications or other professional qualifications such as LLB., MBA., B.Tech., C.A. All faculty shall have experience in training or research or publication or data management or proven record of project management. However, in the cases of serving Group 'A' Officers from Central Government or State Governments this condition can be waived, provided such officers carry at least two years experience relevant to the FPI's mandate.

d) The candidates to be appointed on deputation or to be appointed on contract basis shall have experience of at least 3 years in their parent organization or in academic or training institutions or in reputed consultancy firms/research institutions.

e) For recruitment of candidates on contract basis or appointment of consultants, an advertisement may be released through national and local newspapers and government web portal. A period of at least 30 days from the date of release of the advertisement shall be given for the receipt of completed applications.